Mui 18/12/2015

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮತೀಯ ಅಲ್ಪಸಂಖ್ಯಾತರ ಆಧ್ಯಯನ ಪೀಠ(Chair on Religious Minorities) ವನ್ನು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು ರವರ ವ್ಯಾಪ್ತಿಯಲ್ಲಿನ "Centre for Study of Social Exclusive and Inclusive Policy" ಅಡಿಯಲ್ಲಿ ಪ್ರಾರಂಭಿಸುವ ಬಗ್ಗೆ

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: MWD 207 MDS 2014 ದಿನಾಂಕ: 26.08.2015

2) National Law School of India University) ಇವರ ಪ್ರಸ್ತಾವನೆ ಸಂಖ್ಯೆ: CSS/EIP, ದಿನಾಂಕ: 13.08.2015

**ಪ್ರಸ್ತಾವನೆ:**

2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ **ಸರ್ ಸೈಯದ್ ಅಹಮದ್ ಖಾನ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ**ವನ್ನು ಒಂದು ಮಾದರಿ ಕೇಂದ್ರವಾಗಿ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಂಧೋಧನೆ ಮತ್ತು ಮೌಲ್ಯಮಾಪನಾ ನಡೆಸಲು ಸ್ಥಾಪಿಸುವುದಾಗಿ ಘೋಷಣೆ ಮಾಡಲಾಗಿದೆ.

ಆಯವ್ಯಯ ಭಾಷಣದ ಘೋಷಣೆಯಂತೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ **ಸರ್ ಸೈಯದ್ ಅಹಮದ್ ಖಾನ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ**ವನ್ನು ವಿವಿಧ ವೃಂದದ 13 ಹುದ್ದೆಗಳೊಂದಿಗೆ ಪ್ರಾರಂಭಿಸಲು ಹಾಗೂ ಇದಕ್ಕಾಗಿ ರೂ.315.00ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ 2225-03-001-0-03 ಆಡಳಿತ (ಯೋಜನೆ) ಅಡಿಯಲ್ಲಿ ಮಂಜೂರು ಮಾಡಿ ಆದೇಶಿಸಲಾಗಿದೆ.

ಮೇಲ್ಕಂಡ ಆದೇಶದ ಅನುಬಂಧದ ಕ್ರಮಸಂಖ್ಯೆ 15 ಈ ಕೆಳಕಂಡಂತಿದೆ.

> **"ರಾಜ್ಯ ಮತ್ತು ಕೇಂದ್ರ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳೊಂದಿಗೆ ನಿರಂತರ ಸಂಪರ್ಕ ಬೆಳಸಿ ಯೋಜನೆಗಳ ಮೌಲ್ಯಮಾಪನವನ್ನು ಇವುಗಳ ಸಹಯೋಗದೊಂದಿಗೆ ಕೈಗೊಳ್ಳುವುದು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಅಧ್ಯಯನ ಪೀಠ ತೆರೆಯಲು ಕ್ರಮ ಕೈಗೊಳ್ಳುವುದು"**

ಮೇಲೆ ಉಲ್ಲೇಖಿಸಿರುವ ಅಧ್ಯಯನ ಕೇಂದ್ರದ ಕಾರ್ಯಚಟುವಟಿಕೆಗಳಲ್ಲಿನ ಮಾರ್ಗಸೂಚಿಯಂತೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (ಸಿ.ಎಸ್.ಎಸ್.ಇ.ಐ.ಪಿ.) ಅಡಿಯಲ್ಲಿ **ಮತೀಯ ಅಲ್ಪಸಂಖ್ಯಾತರ ಅಧ್ಯಯನ ಪೀಠವನ್ನು** ಸ್ಥಾಪಿಸಲು ನಿರ್ದೇಶಕರು, ಈ ಸಿ.ಎಸ್.ಎಸ್.ಇ.ಐ.ಪಿ., ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಇವರಿಂದ ಮೇಲೆ (02) ರಲ್ಲಿ ಓದಲಾದ ಪ್ರಸ್ತಾವನೆಯನ್ನು ಪಡೆದು ಪರಿಶೀಲಿಸಿ ಸಲ್ಲಿಸಿರುತ್ತಾರೆ.

2.

D/SHRI-2015-16/KAN/GO/501